

# ನೀರಿನಲ್ಲಿ ಓಡುವ ಹಲ್ಲಿ

ಹಾರುವ ಹಲ್ಲಿಯ ಬಗ್ಗೆ ಕೇಳಿದ್ದೀರಿ. ಆದರೆ ನೀರಿನ ಮೇಲೆ ಓಡುವ ಹಲ್ಲಿಯ ಬಗ್ಗೆ ಕೇಳಿದ್ದೀರಾ? ಅಂಥದ್ದೊಂದು ಹಲ್ಲಿಯು ಕೇಂದ್ರ ಅಮೆರಿಕ ಹಾಗೂ ಚಿಕಾಗೊ ಪ್ರದೇಶಗಳಲ್ಲಿದೆ.

ಬ್ಯಾಸಿಲಿಸ್ಕ್ ಎಂಬ ಹೆಸರಿನಿಂದ ಗುರ್ತಿಸಲ್ಪಡುವ ಈ ಹಲ್ಲಿಗೆ ‘ಜೀಸಸ್ ಲಿಜಾರ್ಡ್’ ಎಂಬ ಹೆಸರು ಬರಲು ಮುಖ್ಯ ಕಾರಣ ಅದು ನೀರಿನ ಮೇಲೆ ಸರಾಗವಾಗಿ ನಡೆಯುವುದು. ನೋಡಲು ನೀರಿನ ಮೇಲೆ ನಡೆದ ಜೀಸಸ್‌ನಂತೆಯೇ ಕಾಣುವುದರಿಂದ ಅಂತೆ. 200ರಿಂದ 600ಗ್ರಾಂಗಳಷ್ಟು ತೂಕವಿರುವ ಈ ಜೀಸಸ್ ಹಲ್ಲಿಯು ಸರಾಸರಿ ಎರಡು ಅಡಿಗಳಷ್ಟು ಉದ್ದದವರೆಗೂ ಬೆಳೆಯಬಲ್ಲುದು. ತಲೆಯ ಹಿಂಭಾಗದಲ್ಲೊಂದು ಜುಟ್ಟಿನಾಕಾರದ ರಚನೆ ಹಾಗೂ ಉದ್ದನೆಯ ಬಾಲವು ಹಸಿರು ಅಥವಾ ಕಂದು ಮಿಶ್ರಿತ ಬಣ್ಣದ ದೇಹದ ಹಲ್ಲಿಗೆ ಮೆರುಗನ್ನು ನೀಡಿದೆ. ಇದುವರೆಗೂ ಇದರ ನಾಲ್ಕು ಪ್ರಬೇಧಗಳನ್ನು ಗುರ್ತಿಸಲಾಗಿದೆ.



### ಚಾಣಾಕ್ಷ ತಂತ್ರಗಾರ

ಬೃಹತ್ ಪಕ್ಷಿಗಳು, ಹಾವುಗಳು, ಮೀನುಗಳು, ಸರೀಸೃಪಗಳು, ಸಸ್ತನಿಗಳು, ರಾಕೂನ್ ಎಂಬ ನಿಶಾಚರಿ ಮಾಂಸಾಹಾರಿ ಪ್ರಾಣಿ, ಒಪ್ಪೋಸಮ್ ಹಾಗೂ ಕೆಲವು ಇರುವೆ ಭಕ್ಷಕಗಳಿಂದ ಸದಾಕಾಲ ಅಪಾಯವನ್ನೆದುರಿಸುತ್ತಿರುವ ಜೀಸಸ್ ಹಲ್ಲಿಗಳು ನೀರಿನ ಮೂಲಗಳ ಬಳಿಯೇ ಹೆಚ್ಚು ಇರಲು ಇಚ್ಛೆಸುತ್ತವೆ ಮತ್ತು ಶತ್ರುಗಳಿಂದ ತಪ್ಪಿಸಿಕೊಳ್ಳಲು ಸಮೀಪದ ನೀರಿನ ಮೂಲಗಳ ಬಳಿಗೆ ತೆರಳಿ ನೀರಿನ ಮೇಲ್ಮೈ ಮೇಲೆ ಸರಾಗವಾಗಿ ಓಡುತ್ತದೆ. ಇದನ್ನು ಹಿಡಿದು ತಿನ್ನಲು ಬಂದ ಬೇಟೆಗಾರನಿಗೆ ನೀರಿನ ಮೇಲೆ ಓಡಿ ತಪ್ಪಿಸಿಕೊಳ್ಳುವ ಹಲ್ಲಿಯನ್ನು ನೋಡಿ ಪೆಚ್ಚುಮೋರೆ ಹಾಕುವುದೊಂದೇ ದಾರಿ ಉಳಿದಿರುತ್ತದೆ.

**ಸರ್ವಭಕ್ಷಕ ಜೀವಿ:** ಋತುವೊಂದರಲ್ಲಿ ಹದಿನೈದರಿಂದ ಇಪ್ಪತ್ತು ಮೊಟ್ಟೆಗಳನ್ನಿಡುವ ಮೂಲಕ ಕಾವು ಕೊಟ್ಟು ಸಂತಾನೋತ್ಪತ್ತಿ ಮಾಡುವ ಜೀಸಸ್ ಹಲ್ಲಿಯು ಸರ್ವಭಕ್ಷಕವಾಗಿದ್ದು ಸಸ್ಯಗಳ ಹೂ, ಚಿಗುರು, ಹಣ್ಣಿನಂತಹ ಭಾಗಗಳನ್ನು ತಿನ್ನುತ್ತದೆ.

■ ಪ.ನಾ. ಹಳ್ಳಿ ಹರೀಶ್‌ಕುಮಾರ್